ಬಳ್ಳಾರಿಯ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿಗೆ ಒದಗಿಸಿದ ಹಣ

೨೬೯ ಶ್ರೀ ಎಂ. ರಾಮಪ್ಪ. (ಬಳ್ಳಾರಿ).—ಮಾನ್ಯ ಆರೋಗ್ಯ, ಕುಟುಂಬ ಕಲ್ಯಾಣ ಮತ್ತು ಸಹಕಾರ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಕಚೇರಿಗೆ ೧೯೮೯–೯೦ರ ಸಾಲಿನಲ್ಲಿ ಔಷಧಿಗಳ ಖರೀದಿಗೆ ಮತ್ತು ಇತರ ಉಪಕರಣಗಳ ಖರೀದಿಗೆ ಒದಗಿಸಿದ್ದ ಹಣ ಎಷ್ಟು ಮತ್ತು ಕುಟುಂಬ ಕಲ್ಯಾಣಕ್ಕೆ ವಿವಿಧ ಶೀರ್ಷಿಕೆಗಳಲ್ಲಿ ಈ ವರೆಗೆ ಖರ್ಚು ಮಾಡಿರುವ ಹಣ ಎಷ್ಟು?

ಆ) ಔಷಧಿಗಳಿಗೆ ಮತ್ತು ಸಾಮಗ್ರಿಗಳ ಖರೀದಿಗೆ ಕೊಟೇಷನ್‌ಗಳನ್ನು ನಿಯಮಗಳ ಪ್ರಕಾರ ಕರೆಯಲಾಗಿದೆಯೇ?

ಇ) ಈ ಬಗ್ಗೆ ಬಂದಿರುವ ಕೊಟೇಷನ್‌ಗಳ ಸಂಖ್ಯೆ ಕಂಪನಿಗಳ ಹೆಸರು ಅವರು ನಮೂದಿಸಿರುವ ದರ ಮತ್ತು ಒದಗಿಸಲು ಕೊಟ್ಟ ಪರವಾನಿಗೆಗಳನ್ನು ಒದಗಿಸಿ.

ಈ) ಔಷಧಿಗಳನ್ನು ಒದಗಿಸಿದ ಕಂಪನಿಗಳು ಕರ್ನಾಟಕ ಸರ್ಕಾರದಿಂದ ಅಥವಾ ಭಾರತ ಸರ್ಕಾರದಿಂದ ನೋಂದಾವಣೆ ಆಗಿದೆಯೇ?

ಶ್ರೀಮತಿ ಮನೋರಮಾ ಮಧ್ವರಾಜ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು.)—

ಅ) ೧) ೧೯೮೯–೯೦ರ ಔಷಧಿಗಳ ಖರೀದಿಗೆ ಒದಗಿಸಿದ್ದ ಹಣ ರೂ. ೩,೧೬,೦೦೦

೨) ೧೯೮೯–೯೦ರ ಸಾಲಿಗೆ ಸರ್ಕಾರಿ ಔಷಧಿಗಳ ಮಳಿಗೆಯಿಂದ ಜನವರಿ ೧೯೯೦ರವರೆಗೆ ಸರಬರಾಜು ಮಾಡಿದ ಒಟ್ಟು ಮೊತ್ತ ರೂ. ೧,೬೫,೦೫೮.೧೮

೩) ಇಲ್ಲಿಯವರೆಗೆ ಇತರೆ ಸಾಮಗ್ರಿಗಳ ಮತ್ತು ಉಪಕರಣಗಳಿಗೆ ಒದಗಿಸಿದ್ದು ರೂ. ೧,೬೨, ೨೮೯–೫೦. ಮೇಲೆ ಕಾಣಿಸಿದ ಹಣವನ್ನು ಜಂಟಿ ನಿರ್ದೇಶಕರು, ಸರ್ಕಾರಿ ಔಷಧಿ ಮಳಿಗೆ ಬೆಂಗಳೂರು ಇವರಿಗೆ ಒದಗಿಸಲಾಗಿದೆ.

ಆ) ಔಷಧಿಗಳನ್ನು ಸರ್ಕಾರಿ ಔಷಧಿ ಮಳಿಗೆಯಿಂದ ಒದಗಿಸಿರುವುದರಿಂದ ಉಪಕರಣಗಳು ಮತ್ತು ಇತರ ಸಾಮಗ್ರಿಗಳನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ನಿರ್ದೇಶನಾಲಯದಿಂದ ಭಾರತ ಸರ್ಕಾರದ ಆಡಳಿತಕ್ಕೊಳಪಟ್ಟ ಐಡಿಪಿಎಲ್ ನಿಂದ ಒದಗಿಸಲಾಗಿರುವುದರಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ನೇರವಾಗಿ ಖರೀದಿಸುವ ಪ್ರಶ್ನೆ ಉತ್ಪಾದಿಸುವುದಿಲ್ಲ.

ಇ) ಅನ್ವಯಿಸುವುದಿಲ್ಲ

ಈ) ಅನ್ವಯಿಸುವುದಿಲ್ಲ

ಶ್ರೀ ಎಂ. ರಾಮಪ್ಪ.—ಮಾನ್ಯ ಅಧ್ಯಕ್ಷರೇ, ನನ್ನ ಆ ಪ್ರಶ್ನೆಗೆ ಔಷಧಿಗಳನ್ನು ಭಾರತ ಸರ್ಕಾರದ ಆಡಳಿತಕ್ಕೊಳಪಟ್ಟ ಐಡಿಪಿಎಲ್‌ನಿಂದ ಒದಗಿಸಲಾಗಿರುವುದರಿಂದ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ನೇರವಾಗಿ ಖರೀದಿಸುವ ಪ್ರಶ್ನೆ ಇಲ್ಲವೆಂದು ಮಾನ್ಯ ಸಚಿವೆಯವರು ತಿಳಿಸಿದ್ದಾರೆ. ಆದರೆ ನಮ್ಮ ಜಿಲ್ಲಾ ಪರಿಷತ್‌ಗಳನ್ನು ನೋಡಿದರೆ ಲಕ್ಷಗಟ್ಟಲೆ ಕ್ಯಾಶ್ ಕೊಟ್ಟು ಔಷಧಿಗಳನ್ನು ಖರೀದಿ ಮಾಡುತ್ತಿರುತ್ತಾರೆ. ಜಿಲ್ಲಾಪಂಚಾಯತ್ತಿಗೆ ಹೆಲ್ತ್ ಡಿಪಾರ್ಟ್‌ಮೆಂಟ್‌ನಿಂದ ಹಣವನ್ನು ಖರ್ಚು ಮಾಡುತ್ತಿದ್ದಾರೆಂದು ಅರ್ಥವಾಗುತ್ತಿದೆ. ಇದಕ್ಕೆ ರಸೀದಿಯೂ ಕೂಡ ಇರುತ್ತದೆ. ಕ್ಯಾಷ್ ಕೊಟ್ಟರತಕ್ಕಂಥ ೧ ಲಕ್ಷ ೫೯,೨೦೦ ರೂ ಇರುತ್ತದೆ. ಅದರಂತೆ ಇನ್ನೊಂದು ಸಾವಿರ ಪೈವೇಟ್ ನವರಿಗೆ ಕೊಟ್ಟಿದ್ದಾರೆ. ಈ ಪೈವೇಟ್ ಕಂಪನಿಗಳಿಗೆ ಕೊಟ್ಟಿರುವುದು ರೆಕಗ್ನೈಸ್ ಆಥವಾ ಅನ್‌ರೆಕಗ್ನೈಸೋ ಎಂಬುದು ಗೊತ್ತಾಗುತ್ತಿಲ್ಲ ಔಷಧಿಗಳಿಗಾಗಿ ಎಷ್ಟು ಹಣವನ್ನು ಖರ್ಚು ಮಾಡುತ್ತಿದ್ದಾರೆಂಬುದಕ್ಕೆ ಮಾಹಿತಿಯೂ ಕೂಡ ಇಲ್ಲ. ತಮಗೆ ಈ ಬಿಲ್‌ಗಳನ್ನೂ ಕೂಡ ಕಳುಹಿಸಿ ಕೊಡುತ್ತೇನೆ. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕಾದ ಜವಾಬ್ದಾರಿ ತಮ್ಮ ಮೇಲೆ ಇದೆ. ಆದ್ದರಿಂದ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀಮತಿ ಮನೋರಮಾ ಮಧ್ವರಾಜ್.—ಮಾನ್ಯ ಅಧ್ಯಕ್ಷರೇ ಜಿಲ್ಲಾಪರಿಷತ್‌ಗಳು ಬಂದ ಮೇಲೆ ತಾಲ್ಲೂಕ್ ಆಸ್ಪತ್ರೆಗಳಿಗೆ ಜಿಲ್ಲಾ ಪರಿಷತ್‌ನವರೇ ಮೆಡಿಸಿನ್‌ಗಳನ್ನು ಪರ್ಚೇಸ್‌ಮಾಡಿ ಕೊಡುತ್ತಿದ್ದಾರೆ. ನಾವು ಅವರಿಗೆ ಬಜೆಟ್ ಪ್ರಾವಿಷನ್ ಮಾತ್ರ ಕೊಡುತ್ತೇವೆ. ಆದ್ದರಿಂದ ಈ ಬಗ್ಗೆ ಹೆಚ್ಚಿನ ವಿಚಾರಗಳನ್ನು ಹೇಳುವುದಕ್ಕೆ ಅಸಮರ್ಥರಾಗಿದ್ದೇವೆ.

ಶ್ರೀ ಎ. ರಾಮಪ್ಪ.—ರೆಕಗ್‌ನೈಸ್ಡ್ ಅಥವಾ ಅನ್ ರೆಕಗ್‌ನೈಸ್ಡ್ ಎಂದು ನೋಡಿ ಅಂತಹ ಕಂಪೆನಿ ಮೇಲೆ ಕಡಿವಾಣ ಹಾಕದೆ ಜಿಲ್ಲಾ ಪರಿಷತ್ತಿನವರಿಗೆ ಪೂರ್ಣ ಅಧಿಕಾರ ಕೊಡುತ್ತೀರಾ? ಅವರಿಗೆ ಬಿಲ್ ಮಾಡಿಕೊಂಡು ರೊಕ್ಕ ತೆಗೆದುಕೊಳ್ಳುವುದಕ್ಕೆ ಬಿಡುತ್ತೀರಾ? ಇದಕ್ಕೆ ಆಡಿಟ್ ಏನಾದರೂ ಇದೆಯೇ ಬೇರೆ ಏನಾದರೂ ವ್ಯವಸ್ಥೆ ಇದೆಯೇ?

ಶ್ರೀಮತಿ ಮನೋರಮ ಮಧ್ವರಾಜ್.—ನಮ್ಮ ಇಲಾಖೆಯವರು ರೇಟ್ ಕಾಂಟ್ರಾಕ್ಟ್ ಮಾಡಿ ಇಂಥದ್ದೇ ಕಂಪನಿಯಿಂದ ತೆಗೆದುಕೊಳ್ಳಬೇಕೆಂದು ಆದೇಶ ಕೊಟ್ಟಿದ್ದಾರೆ. ಇದಕ್ಕೆಲ್ಲ ಬಸವಲಿಂಗಪ್ಪನವರೇ ಸರಿಯಾದ ವ್ಯಕ್ತಿ ಎಂದು ಭಾವಿಸುತ್ತೇನೆ. ಅವರನ್ನು ಹತೋಟಿಗೆ ತರಬೇಕೆಂದು ಕೇಳಿಕೊಂಡು, ಈ ಬಗ್ಗೆ ಏನಾದರೂ ನಿರ್ದಿಷ್ಟವಾಗಿ ದೂರುಗಳು ಬಂದರೆ ಅದನ್ನು ತನಿಖೆಗೆ ಒಳಪಡಿಸಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಜಿಲ್ಲಾ ಪರಿಷತ್ತುಗಳ ಆಡಳಿತ ಅಧಿಕಾರ

೨೬೨. ಶ್ರೀ ಕೆ. ಹರ್ಷಕುಮಾರ ಗೌಡ. (ಚಾಮರಾಜ ಕ್ಷೇತ್ರ).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ಪಶು ಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ನಗರ ಪ್ರದೇಶಕ್ಕೆ ಸೇರಿದ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಆಸ್ಪತ್ರೆಗಳು ಜಿಲ್ಲಾ ಪರಿಷತ್ ಆಡಳಿತಕ್ಕೆ ಒಳಪಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ;

ಆ) ಹಾಗಿದ್ದಲ್ಲಿ ಅವುಗಳ ಅಭಿವೃದ್ಧಿಯ ಬಗ್ಗೆ ಚರ್ಚಿಸಲು ಜನತಾ ಪ್ರತಿನಿಧಿಗಳಿಗೆ ಅವಕಾಶ ವಿದೆಯೇ ಇಲ್ಲದಿದ್ದರೆ ಅವಕಾಶ ಮಾಡಿ ಕೊಡಲಾಗುವುದೆ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ಜಿಲ್ಲಾ ಪರಿಷತ್ ಕಾಯಿದೆ ಕಲಂ ೧೩೮ (೧)ರ ಅನ್ವಯ ನಗರ ಪ್ರದೇಶಕ್ಕೆ ಸೇರಿದ ಶಾಲೆಗಳು ಆಸ್ಪತ್ರೆಗಳು ಜಿಲ್ಲಾ ಪರಿಷತ್ ಆಡಳಿತಕ್ಕೆ ಒಳಪಡಬಹುದಾಗಿದೆ.

ಆ) ಅವಕಾಶವಿದೆ.

ಶ್ರೀ ಹರ್ಷಕುಮಾರ ಗೌಡ.—ನನ್ನ ಮೊದಲನೇ ಪ್ರಶ್ನೆಗೆ ಜಿಲ್ಲಾ ಪರಿಷತ್ ಕಾಯಿದೆ ಕಲಂ ೧೩೮ (೧)ರ ಅನ್ವಯ ನಗರ ಪ್ರದೇಶಕ್ಕೆ ಸೇರಿದ ಶಾಲೆಗಳು ಆಸ್ಪತ್ರೆಗಳು ಜಿಲ್ಲಾ ಪರಿಷತ್ ಆಡಳಿತಕ್ಕೆ ಒಳಪಡುತ್ತವೆಂದು ಹೇಳಿದ್ದಾರೆ. ನಾನು ಅವರಿಂದ ಉತ್ತರ ಬಯಸುತ್ತೇನೆ. ನಮ್ಮ ಮೈಸೂರು ನಗರ ಜಿಲ್ಲಾ ಪರಿಷತ್ತಿಗೆ ಯಾವ ಆಧಾರದ ಮೇಲೆ ಯಾವ ಉದ್ದೇಶ ಇಟ್ಟುಕೊಂಡು ಸೇರಿಸಿದ್ದೀರಿ ಜೊತೆಗೆ ಎರಡನೇ ಪ್ರಶ್ನೆಗೆ ಜಿಲ್ಲಾ ಪರಿಷತ್ತಿನಲ್ಲಿ ಶಾಸಕರು ಮಾತನಾಡುವುದಕ್ಕೆ ಅವಕಾಶ ಇದೆ ಎಂದು ಹೇಳಿದ್ದಾರೆ. ಅವಕಾಶ ಇದೆಯೆಂ? ಇದ್ದರೆ ಎಲ್ಲಿ ಅವಕಾಶ ಮಾಡಿದ್ದೀರಿ? ಇಲ್ಲದಿದ್ದರೆ ಯಾವಾಗಿನಿಂದ ಅವಕಾಶ ಮಾಡಿಕೊಡುತ್ತೀರಿ?

ಶ್ರೀ ಬಿ. ಬಸವಲಿಂಗಪ್ಪ.—ಜಿಲ್ಲಾ ಪರಿಷತ್ತಿಗೆ ಒಳಪಟ್ಟಿರತಕ್ಕ ಸಂಸ್ಥೆಗಳು ಏನಿವೆ ಅವುಗಳ ಮೇಲೆ ಅವರಿಗೆ ಹತೋಟಿ ಉಂಟು. ಉಳಿದವುಗಳ ಮೇಲೆ ಇಲ್ಲ.

ಶ್ರೀ ಹರ್ಷಕುಮಾರ ಗೌಡ.—ನಮ್ಮ ಮೈಸೂರು ನಗರದ ಸುಮಾರು ೨ ಲಕ್ಷ ಶಾಲಾ ಮಕ್ಕಳ ಸರ್ವತೋಮುಖ ಅಭಿವೃದ್ಧಿಯ ಜವಾಬ್ದಾರಿ ಮತ್ತು ಉಪಾಧ್ಯಾಯರ ಸಮಸ್ಯೆಗಳ ಮತ್ತು ವರ್ಗಾವಣೆಯ ಜವಾಬ್ದಾರಿ ಜೊತೆಗೆ ಪ್ರೈಮರಿ ಹೆಲ್ತ್ ಸೆಂಟರ್‌ಗಳು ಮತ್ತು ಪಶುಸಂಗೋಪನಾ ಸಂಸ್ಥೆಗಳನ್ನು ಮೈಸೂರು ನಗರದ ಜಿಲ್ಲಾ ಪರಿಷತ್ತಿಗೆ ಸೇರಿಸಿದ್ದಾರೆ. ಯಾರ ಬಗ್ಗೆ ನಾವು ಅಲ್ಲಿ ಚರ್ಚೆ ಮಾಡಬೇಕು ಹಾಗೂ ಮಾತನಾಡಬೇಕ್ಕು, ಅಂತಹ ಅವಕಾಶ ಇರದಂತಹ ಪರಿಸ್ಥಿತಿಯನ್ನು ಮೈಸೂರು ನಗರದ ಶಾಸಕರು ಎದುರಿಸುತ್ತಿದ್ದಾರೆ. ಜಿಲ್ಲಾ ಪರಿಷತ್ತುಗಳನ್ನು ಯಾವ ಉದ್ದೇಶ ಇಟ್ಟುಕೊಂಡು ನಜೀರ್‌ಸಾಬ್‌ರವರು ರಚನೆ ಮಾಡಿದರೋ ಅಲ್ಲಿ ಪಟ್ಟಣ ಪ್ರದೇಶಗಳವರಿಗೆ ಅವಕಾಶ ಇಲ್ಲ. ಗ್ರಾಮೀಣ ಪ್ರದೇಶಗಳು ವಿಶೇಷ ಒಳಪಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿರಬಹುದು. ಆದ್ದರಿಂದ ನಾನು ಪ್ರಾರ್ಥಿಸುವುದಾದರೂ ಇಷ್ಟೆ, ಪಟ್ಟಣ ಪ್ರದೇಶದ ಶಾಸಕರು ಕೂಡ ಅಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು, ಹಾಗೂ ಈ ತಾರತಮ್ಯವನ್ನು ಅಸಂಗತ ನೀತಿಯನ್ನು ಸರಿಪಡಿಸಬೇಕೆಂದು ಒತ್ತಾಯಿಸುತ್ತೇನೆ. ಇಲ್ಲದಿದ್ದರೆ ಅರಳಿ ಕಟ್ಟೆ ಮೇಲೆ ಕುಳಿತುಕೊಂಡು ಮಾತನಾಡುವುದಕ್ಕೆ (ಶಾಲೆಗಳ ಬಗ್ಗೆ